ಅ) ಕೊಪ್ಪಳ ತಾಲ್ಲೂಕಿನ ಹಿರೇಹಳ್ಳ ನೀರಾವರಿ ಯೋಜನೆಯ ಮೂಲ ಅಂದಾಜು ಎಷ್ಟು? ಮತ್ತು ಈಗಿನ ಪರಿಷ್ಕೃತ ಅಂದಾಜು ಎಷ್ಟು?

ಆ) ಈ ಯೋಜನೆಯನ್ನು ಪ್ರಾರಂಭಿಸಿದ್ದು ಎಂದು ಮತ್ತು ಈಗ ಇದು ಯಾವ ಹಂತದಲ್ಲಿದೆ?

ಇ) ಈ ಯೋಜನೆಗೆ ಈವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ಯೋಜನೆಯು ಪೂರ್ಣಗೊಳ್ಳಲ್ಲಿಕ್ಕೆ ಇನ್ನು ಎಷ್ಟು ಹಣ ಬೇಕಾಗುವುದು?

ಈ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು):-

ಅ) ಹಿರೇಹಳ್ಳ ಯೋಜನೆಯ ಮೂಲ ಅಂದಾಜು ರೂ.6.35 ಕೋಟಿಗಳು ಹಾಗೂ ಇದರ ಪರಿಷ್ಕೃತ ಅಂದಾಜು ರೂ.90.00 ಕೋಟಿಗಳು.

ಆ) 1977ರಲ್ಲಿ ಈ ಯೋಜನೆಯು ಪ್ರಾರಂಭವಾಯಿತು. ಇದುವರೆಗೆ ಮಣ್ಣಿನ ಏರಿಯ ಬಹುತೇಕ ಕೆಲಸವು ಮುಗಿದಿದ್ದು, ಕೋಡಿಯ ಕಾಂಕ್ರಿಟ್ ಕೆಲಸವು ಪ್ರಗತಿಯಲ್ಲಿರುತ್ತದೆ ಹಾಗೂ ಕಾಲುವೆ ಕೆಲಸಗಳು ಪ್ರಗತಿಯಲ್ಲಿವೆ.

ಈ) 2000 ಇಸವಿಯೊಳಗಾಗಿ ಈ ಯೋಜನೆಯನ್ನು ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ವಿಷಯ: ಮಡಿವಾಳದಿಂದ ಗಾರ್ಲೆಬಾವಿ ಪಾಳ್ಯದವರೆಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೀದಿ ದೀಪದ ಸೌಲಭ್ಯ :

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1631 (1844)

ಶ್ರೀ ಎಂ. ಶ್ರೀನಿವಾಸ (ಉತ್ತರಹಳ್ಳಿ): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹೊಸೂರು ರಸ್ತೆ ಮಡಿವಾಳದಿಂದ ಗಾರವೆಭಾವಿ ಪಾಳ್ಯದವರೆಗೆ ಇರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೀದಿ ದೀಪದ ಸೌಲಭ್ಯ ಇಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

2) ಹೊಸೂರು ರಸ್ತೆಯಿಂದ ಬಿ.ಟಿ.ಎಂ. ಬಡಾವಣೆಗೆ ಸೇರುವ ರಿಂಗ್ ರಸ್ತೆಯಲ್ಲಿರುವ ಕೇಂದ್ರ ರೇಷ್ಮೆಮಂಡಳಿ ಹತ್ತಿರ ಒಂದು ಲೈಟ್ ಕಂಬ ಬಾಗಿ ಕೆಳಗೆ ಬೀಳುವ ಸ್ಥಿತಿಯಲ್ಲಿದ್ದು, ಜನರು ದೂರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

3) ಬಿ.ಟಿ.ಎಂ. ಬಡಾವಣೆ, ಬೈಕೊ ಬಡಾವಣೆ ಜೆ.ಪಿ.ನಗರ, ಬನಶಂಕರಿ 3ನೇ ಹಂತದ ಬಡಾವಣೆಯ ರಿಂಗ್ ರಸ್ತೆಯಲ್ಲಿರುವ ಬಲ್ಬ್‌ಗಳು ಹಾಳಾಗಿದ್ದು ತುಂಬಾ ದಿನಗಳಿಂದ ರಿಪೇರಿ ಮಾಡದೆ ಜನರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ. ಬಂದಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಹಾಗೂ ವಕ್ಫ್ ರಾಜ್ಯ ಸಚಿವರು):-

ಅ) ಇಲ್ಲ. ಇದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವುದಿಲ್ಲ.

ಆ) ಸೆಂಟ್ರಲ್ ಸಿಲ್ಕ್ ಬೋರ್ಡ್ ಹತ್ತಿರವಿರುವ ದಕ್ಕೆಗೊಂಡಿರುವ ಪಿಮ್ಯೂಲ್ ಕಂಬಗಳ ರಿಪೇರಿ

ಮರಳಿ ಸ್ಥಾಪನೆ ಕಾರ್ಯವನ್ನು ತೀವ್ರವಾಗಿ ಕೈಗೊಳ್ಳಲಾಗುವುದು.

ಇ) ಪ್ರಸ್ತಾಪಿಸಿರುವ ವರ್ತೂಲ ರಸ್ತೆ ಭಾಗಗಳಲ್ಲಿನ ವಿದ್ಯುತ್ ಬೆಳಕಿನ ವ್ಯವಸ್ಥೆ ಸಮರ್ಪಕವಾಗಿಲ್ಲದಿರುವುದು ನಿಜ. ಸಂಬಂಧಪಟ್ಟ ಸಂಸ್ಥೆಯಿಂದ ವ್ಯವಸ್ಥೆಯನ್ನು ಸುಸ್ಥಿತಿಗೆ ತರಲು ತೀವ್ರ ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ: ಆಳಂದ ತಾಲ್ಲೂಕಿನ ಹಡಲಗಿ ನೀರಾವರಿ ಕೆರೆಯ ನಿರ್ಮಾಣ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1633 (1526)

ಶ್ರೀ ಸುಭಾಷ್ ಆರ್.ಗುತ್ತೇದಾರ್ (ಆಳಂದ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ತಾಲ್ಲೂಕಿನ ಹಡಲಗಿ ನೀರಾವರಿ ಕೆರೆಯ ನಿರ್ಮಾಣಕ್ಕೆ ಸರ್ಕಾರದವರು ಮಂಜೂರಾತಿ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಯಾವಾಗ ಕೆಲಸ ಪ್ರಾರಂಭವಾಗುತ್ತದೆ?

ಇ) ಇದಕ್ಕೆ ಈ ವರ್ಷ ಎಷ್ಟು ಹಣ ಬಿಡುಗಡೆಯಾಗಿದೆ?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ನಿಜ.

ಆ) ಈ ಕಾಮಗಾರಿಯ ಶಕ್ಯತೆಯ ಬಗ್ಗೆ ಪುನರ್ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಇ) 1995-96ನೇ ಸಾಲಿನ ಆಯವ್ಯಯದಲ್ಲಿ 20.000 ರೂ.ಗಳ ಅನುದಾನ ಒದಗಿಸಲಾಗಿದೆ.

ವಿಷಯ: ಪಟ್ಟಣಕುಡಿಯ ಸಣ್ಣ ನೀರಾವರಿ ಕೆರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1635 (1610)

ಶ್ರೀ ಸುಭಾಷ್. ಜೋಶಿ (ನಿಪ್ಪಾಣಿ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣಕುಡಿಯ ಸಣ್ಣ ನೀರಾವರಿ ಕೆರೆಯು ಮಂಜೂರಾಗಿದೆಯೇ?

ಆ) ಆಯವ್ಯಯದಲ್ಲಿ ಮಂಜೂರಾದ ಮೊತ್ತ ಎಷ್ಟು?

ಇ) ಕೆಲಸವು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಇಲ್ಲ.

ಆ) 1995-96ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಗೆ ರೂ.20.00 ಲಕ್ಷಗಳ ಅನುದಾನ ಒದಗಿಸಲಾಗಿದೆ.

ಇ) ಅಂದಾಜಿಗೆ ಮಂಜೂರಾತಿ ನೀಡಿದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ವಿಷಯ: ಹೆಚ್ಚುವರಿ ಎಸ್.ಪಿ.ಹುದ್ದೆಗಳನ್ನು ಸೃಷ್ಟಿಸಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1637 (2341)